# ಕೈಗೆ ಸಿಗದ ಲಿಯೊನಿಡ್

**ಶ್ರೀ ಹರ್ಷ ಗಂಜಾಂ**



ನವೆಂಬರ್ 17, 2009: ಅಪರೂಪದ ಲಿಯೊನಿಡ್ ಉಲ್ಕಾಪಾತ ನಡೆಯುವ ಸುದ್ದಿ ಕೇಳಿ ನಾವು ರೋಮಾಂಚಿತಗೊಂಡೆವು. ಹಲವು ಸ್ನೇಹಿತರು ಈ ಉಲ್ಕಾಪಾತ ಕ್ಯಾಮೆರಾದಲ್ಲಿ ಸೆರೆಹಿಡಿಯಬೇಕೆಂದು ನಿರ್ಧರಿಸಿದೆವು. ಎಲ್ಲರೂ ಪ್ರಕೃತಿ ಫೋಟೋಗ್ರಫಿಯಲ್ಲಿ ಆಸಕ್ತಿ ಇದ್ದವರು. ಹೀಗಾಗಿ 3-4 ಗುಂಪು ಮಾಡಿಕೊಂಡೆವು. ಒಂದು ಗುಂಪು ಕೊಡಚಾದ್ರಿ ಬೆಟ್ಟದ ಮೇಲೆ, ಇನ್ನೊಂದು ಗುಂಪು ಬಯಲು ಸೀಮೆಯಲ್ಲಿ ಮತ್ತೊಂದು ಗುಂಪು ಕರಾವಳಿಯಲ್ಲಿ ಕಾಯುತ್ತಿದ್ದೆವು. ಎಲ್ಲರಲ್ಲೂ ಅಪರೂಪದ ಕ್ಷಣವನ್ನು ಸೆರೆಹಿಡಿಯುವ ಉತ್ಸಾಹ. ಇನ್ನೇನು ರಾತ್ರಿ 11 ಗಂಟೆ ಆಯಿತು. ಉಲ್ಕಾಪಾತವಾಗುತ್ತದೆ ಎನ್ನುವ ಕ್ಷಣ ಬಂದಾಗ ಒಮ್ಮೆಲೆ ಮೋಡಗಳು ಆವರಿಸಿ ಕೊಂಡವು. ನಿರೀಕ್ಷೆಗಳೆಲ್ಲ ಠುಸ್ ಆಯಿತು. ಮೋಡ ಹೋಗಬಹುದು ಎಂದು ರಾತ್ರಿ ಇಡೀ ಕಾದೆವು. ಎಲ್ಲಿಯೂ ನಮಗೆ ಚಿತ್ರಗಳೇ ಸಿಗಲಿಲ್ಲ. ನಾವು ಕಾದು ಕಾದು ಸಿಗದೆ ಹೋಗುವುದೇ ಜಾಸ್ತಿ.

**(ಲೇಖಕರು ವೃತ್ತಿಯಲ್ಲಿ ಆರ್ಟ್ ಆಫ್ ಲಿವಿಂಗ್‌ನಲ್ಲಿ ಎಂಜಿನಿಯರ್. ಪ್ರವೃತ್ತಿ ಮಾತ್ರ ಫೋಟೋಗ್ರಫಿ. ದೇಶ- ವಿದೇಶಗಳಲ್ಲಿ ಕಾಡು ಮೇಡು ಅಲೆದು ನಿಸರ್ಗದ ವೈಭವ ವನ್ನು ಸೆರೆಹಿಡಿಯುವ ಇವರಿಗೆ ಆಕಾಶಕಾಯಗಳ ಫೋಟೋಗ್ರಫಿ ಎಂದರೆ ಎಲ್ಲಿಲ್ಲದ ಪ್ರೀತಿ. ಇವರ ಸಂಪರ್ಕ- http://www.facebook.com/ sriharsha.ganjam)**



**ಭರತ್‌ಪುರದಲ್ಲಿ ಶ್ರೀಹರ್ಷ ಕ್ಯಾಮೆರಾಕ್ಕೆ ಸೆರೆಬಿದ್ದ ಹೂಪ್ ಪಕ್ಷಿ. ಇದು ಯುರೋಪ್, ಏಷ್ಯಾದ ಕೆಲವು ಭಾಗ ಮತ್ತು ಉತ್ತರ ಆಫ್ರಿಕಾಗಳಲ್ಲಿ ಕಾಣಸಿಗುತ್ತದೆ.**